ಕೊಡುವಂಥ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳಬೇಕು. ಇದರ ಬಗ್ಗೆ ನನ್ನ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುವವನಿದ್ದೇನೆ. ಅದರ ಬಗ್ಗೆ ಪ್ರತ್ಯೇಕವಾದ ಸೂಚನೆಯನ್ನು ಕೊಡುತ್ತೇನೆ. ಈಗ ತುಮಕೂರಿನ ಜಿಲ್ಲಾ ಪಂಚಾಯತಿಯಲ್ಲಿ ನಡೆದಿರುವ ಘಟನೆ ಬಗ್ಗೆ ಈಗಾಗಲೇ ನಾನು Principal Secretary ಯವರಿಗೆ put up ಮಾಡಿ ಇದರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಿಕೊಂಡು ನನಗೆ ವರದಿಯನ್ನು ಸಲ್ಲಿಸಬೇಕೆಂದು ಈಗಾಗಲೇ ನಾನು put up ಮಾಡಿದ್ದೇನೆ. ಅದು ಬಂದ ತಕ್ಷಣ ಅಲ್ಲೇನಾದರೂ ಅಧಿಕಾರಿಗಳು ತಪ್ಪು ಮಾಡಿದ್ದರೆ ಅದರ ಬಗ್ಗೆ ನಾವು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು.

Sri QAMARUL ISLAM : ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. All the MLAs MLCs of the Hyderabad-Karnataka in this session, even Leader of the Opposition have agreed is on that; a resolution will be passed regarding article 371.

Mr. SPEAKER : Already it has been passed.

6. ಗಮನ ಸೆಳೆಯುವ ಸೂಚನೆಗಳು :

(ಗಮನ ಸೆಳೆಯುವ ಸೂಚನೆ ಕಳುಹಿಸಿದ್ದ ಶ್ರೀ ಎಂ.ನಾರಾಯಣಸ್ವಾಮಿ, ಶ್ರೀ ರಘುಪತಿ ಭಟ್, ಶ್ರೀ ರಮಾನಾಥ ರೈ ಸದನದಲ್ಲಿ ಹಾಜರಿರಲಿಲ್ಲ)

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ನಿಯಮ 73 ರಡಿಯಲ್ಲಿ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಮನೆಗೆ ಹೋಗಿದ್ದಾರೆ. ಆದಕಾರಣ ಇದಕ್ಕೆ ಉತ್ತರವನ್ನು ಮುಂದೆ ಕೊಡಿಸುತ್ತೇನೆ. ತಾವು ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬಹುದು.

(ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದ ಶ್ರೀ ಎಂ. ಕೃಷ್ಣಪ್ಪ, ಶ್ರೀ ನೆ.ಲ. ನರೇಂದ್ರಬಾಬು, ಶ್ರೀ ಬಿ.ಸಿ.ಪಾಟೀಲ್, ಶ್ರೀ ಹೆಚ್.ಎಸ್.ಪ್ರಕಾಶ್ ಈ ಸಂದರ್ಭದಲ್ಲಿ ಸದನದಲ್ಲಿ ಹಾಜರಿರಲಿಲ್ಲ)

i) ವಿಷಯ : ಮೊಗೇರ ಜಾತಿಯ ಜನರನ್ನು ಪರಿಶಿಷ್ಟ ಜಾತಿ ಎಂದು ಪರಿಗಣಿಸಿ ಅವರಿಗೆ ಯಾವುದೇ ಸೌಲಭ್ಯ ನೀಡದಿರುವ ಬಗ್ಗೆ.

* * *

ಶ್ರೀ ಸುನಿಲ್ ವಿ.ಹೆಗಡೆ (ಶ್ರೀ ಜೆ.ಡಿ. ನಾಯಕ್ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮೊಗೇರ ಜಾತಿಯ ಜನರನ್ನು ಪರಿಶಿಷ್ಟ ಜಾತಿ ಎಂದು ಪರಿಗಣಿಸಿ ಅವರಿಗೆ ಯಾವುದೇ ಸೌಲಭ್ಯ ನೀಡದಿರುವ ಬಗ್ಗೆ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೊಗೇರ ಜಾತಿಯನ್ನು ಪರಿಶಿಷ್ಟ ಜಾತಿ ಎಂದು ಗುರುತಿಸಿ ಭಾರತ ಸರ್ಕಾರ 1956 ರಲ್ಲಿ . . .

ಶ್ರೀ ಗೋವಿಂದ ಎಂ. ಕಾರಜೋಳ್ : ಮಾನ್ಯ ಸಚಿವರೆ, ಒಂದು ನಿಮಿಷ ತಾವು ಯೀಲ್ಡ್ ಆಗಿ. ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿಗೆ ಎಲ್ಲರನ್ನೂ ಸೇರಿಸಬೇಕೆಂದು ದಿನೇದಿನೇ ಏನು ಬೇಡಿಕೆ ಬರುತ್ತಿದೆ, ಇದು ಬಹಳ ಕಾನೂನು ಬಾಹಿರವಾಗಿರತಕ್ಕಂಥ ವಿಚಾರ. ಸಂವಿಧಾನದ 341 ರಡಿಯಲ್ಲಿ ಮತ್ತು 342 ರಡಿಯಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲಾತಿ ಸೌಲಭ್ಯ ಇರತಕ್ಕಂಥದ್ದು. ಸಂವಿಧಾನದ 341ರ ಪ್ರಕಾರ ಪರಿಶಿಷ್ಟ ಜಾತಿ ಎಂದರೆ ಯಾರು ಅಸ್ಪೃಶ್ಯರಿದ್ದಾರೆ, ಯಾರನ್ನು ಮುಟ್ಟಿಸಿಕೊಳ್ಳುವುದಿಲ್ಲ, ಯಾರನ್ನು ಹೊಲೆ–ಮಾದಿಗರೆಂದು ಹೇಳ ಊರಿನ ಹೊರಗಡೆ ಇಟ್ಟಿದ್ದಾರೆ, ಯಾರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರಂತಿದ್ದಾರೆ, ಅಂಥವರಿಗೆ ಸಂವಿಧಾನದ ಆಶಯ ಇದೆ. ಭಾರತ ಸಂವಿಧಾನದ ಆಶಯವೇನಿದೆ ಎಂದರೆ ಅಂಥವರನ್ನು ಮೇಲಕ್ಕೆ ಎತ್ತಬೇಕು, ಅವರನ್ನು ಅಸ್ಪೃಶ್ಯತೆಯಿಂದ ನಿವಾರಣೆ ಮಾಡಬೇಕು, ಇನ್ನುಳಿದವರಂತೆ ಅವರೂ ಕೂಡ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಬೇಕೆಂಬುದೇ ಸಂವಿಧಾನದ ಆಶಯವಾಗಿದೆ.

(7-50 PM)

ಆದರೆ ಏನಾಗಿದೆ ಎಂದರೆ fashion ಆಗಿಬಿಟ್ಟಿದೆ. ಯಾರ್ಯಾರನ್ನೋ ಖುಷಿ ಪಡಿಸುವುದಕ್ಕೆ ಸಲುವಾಗಿ, ಯಾರ್ಯಾರಿಗೋ ಅನುಕೂಲ ಮಾಡುವುದ ಕ್ಕೋಸ್ಕರವಾಗಿ, ಪರಿಶಿಷ್ಟ ಜಾತಿ ಜನಾಂಗದ ಮೀಸಲಾತಿಯನ್ನು ಈ ರೀತಿ

ಕಬಳಿಸುತ್ತಾ ಹೋದರೆ ನಾವು ಬಹಳ ನೋವನ್ನು ಅನುಭವಿಸಬೇಕಾಗುತ್ತದೆ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು, ಮಹಾತ್ಮ ಗಾಂಧೀಜಿಯವರು, ಈ ದೇಶದ ಅಂದಿನ ನಾಯಕರೆಲ್ಲರೂ ಈ ಜನಾಂಗಕ್ಕೆ ಅನ್ಯಾಯವಾಗಿದೆ, ಈ ಜನಾಂಗದವರಿಗೆ ಮೀಸಲಾತಿ ಸೌಲಭ್ಯವನ್ನು ಕೊಡಬೇಕೆನ್ನುವ ಉದ್ದೇಶದಿಂದ ಏನು ಮಾಡಿದ್ದಾರೆ, ಆದರೆ ಇವತ್ತು CRE cell ನಲ್ಲಿ 70,000 ಬೋಗಸ್ caste certificate ತೆಗೆದುಕೊಂಡಿರುವಂತಹ ಪ್ರಕರಣಗಳು ವಿಲೇವಾರಿ ಆಗದೆ ಉಳಿದಿವೆ. ಎಲ್ಲಾ ಸರ್ಕಾರಿ ನೌಕರಿಯನ್ನು ಅವರೇ ಕಬಳಿಸುತ್ತಿದ್ದಾರೆ. ಈ ರೀತಿ ಇರುವಾಗ ಮಾನ್ಯ ಸುನಿಲ್ ಹೆಗಡೆಯವರೇ, ನೀವು ಈ ಮನೆಗೆ ನಿನ್ನೆ ಮೊನ್ನೆ ಬಂದಿರುವವರು. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನೀವು ಯಾವಾಗಲಾದರೂ ಯಾರನ್ನಾದರೂ ವಿಚಾರ ಮಾಡಿದ್ದೀರಾ? ನಾಯಿ–ನರಿಗಳನ್ನು ಒಳಗೆ ಬಿಟ್ಟುಕೊಳ್ಳುತ್ತೀರಿ, ಹೊಲೆ–ಮಾದಿಗರಾದ ಮನುಷ್ಯರನ್ನು ಏಕೆ ಒಳಗಡೆ ಬಿಟ್ಟುಕೊಳ್ಳುವುದಿಲ್ಲವೆಂದು ಕೇಳಿದ್ದೀರಾ? ನೀವು ಇಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಂದಿದ್ದೀರಿ. ನಿಮಗೆ ಏನೂಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದಲ್ಲಿರುವಂತಹ ಮೊಗೇರ ಮೂಲತಃ ಅಸ್ಪೃಶ್ಯರು, ಬೇಟೆ ಆಡುವವರು, ಮಾಂಸ ತಿನ್ನತಕ್ಕಂಥವರು, ಅವರಿಗೆ ಅಸ್ಪೃಶ್ಯತೆ ಆಚರಣೆ ಜಾರಿಯಲ್ಲಿದೆ. ಅವರನ್ನು scheduled caste ನಲ್ಲಿ ಸೇರಿಸಬೇಕೆಂದು ಹೇಳಿ ಸಂವಿಧಾನದ Article 341 ನಲ್ಲಿ ಅವಕಾಶವಿದೆ. ಆದರೆ ಉತ್ತರ ಕನ್ನಡದಲ್ಲಿರುವ ಮೊಗೇರ ಜನಾಂಗ ಏನಿದ್ದಾರೆ, ಅವರ ಆಚಾರ–ವಿಚಾರ ಎಲ್ಲಾ ಬ್ರಾಹ್ಮಣರು ಇದ್ದ ಹಾಗಿದ್ದಾರೆ. ಅವರು ಜನಿವಾರ ಹಾಕುತ್ತಾರೆ. ಅವರು ಲಗ್ನ ಮತ್ತು ಮುಂಜಿಗಳನ್ನು ಬ್ರಾಹ್ಮಣ ಆರ್ಚಾಯರು ಬಂದು ಮಾಡುತ್ತಾರೆ. ಅವರು ಮೀನನ್ನು ಹಿಡಿಯಬೇಕಾದರೆ ಜನಿವಾರ ಅಪವಿತ್ರ ಆಗುತ್ತದೆಂದು ಹೇಳಿ ಜನಿವಾರ ತೆಗೆದು ಮೀನು ಹಿಡಿದು ಬಂದು ಸ್ನಾನ ಮಾಡಿ ಜನಿವಾರ ಹಾಕಿಕೊಳ್ಳುತ್ತಾರೆ. ಅವರು ಸತ್ತ 11 ದಿನಕ್ಕೆ ಬ್ರಾಹ್ಮಣರು ಬಂದು ತಿಥಿ ಮಾಡುತ್ತಾರೆ. ಹಾಗಾಗಿ ಇವರನ್ನು ನೀವು schedule caste ನಲ್ಲಿ ಮೀಸಲಾತಿ ಕೊಡಬೇಕೆಂದು ಹೇಳಿದರೆ ಯಾವ ನ್ಯಾಯ? ನೀವು ಇನ್ನು ಚಿಕ್ಕವರಿದ್ದೀರಿ, ನಿಮಗೆ ನಾನು ಇನ್ನು ಕೆಟ್ಟ ಶಬ್ದದಲ್ಲಿ ಹೇಳುವಂತಹ ಪ್ರಸಂಗ ಬರುತ್ತದೆ. ಅದಕ್ಕೆ ಈ ವಿಷಯ ಅಜೆಂಡಾದಲ್ಲಿ ಬಂದಿರುವುದರಿಂದ, ನಾನು ಇಲ್ಲಿಗೆ ಸಂವಿಧಾನವನ್ನು ತಂದಿದ್ದೇನೆ, Backward class orderಗಳನ್ನು ತಂದಿದ್ದೇನೆ,

scheduled caste Act ತಂದಿದ್ದೇನೆ, ಕೇರಳ scheduled caste Act ತಂದಿದ್ದೇನೆ, ಹಾವನೂರು ವರದಿ ತಂದಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ರೀತಿ ಇದನ್ನು allow ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಅದಕ್ಕೆ ನನ್ನ ವಿನಂತಿ ಇದೆ. ಇಲ್ಲವೆಂದರೆ ಒಂದು ಕೆಲಸ ಮಾಡಿಬಿಡೋಣ. ಈ ಮನೆಯ ಎಲ್ಲಾ ಸದಸ್ಯರು ಒಪ್ಪುವುದಾದರೆ ಸಂವಿಧಾನದಲ್ಲಿರುವ Article 341 ಅನ್ನು ಕರ್ನಾಟಕದಲ್ಲಿ ಅದರ ಅವಶ್ಯಕತೆ ಇಲ್ಲೆಂದು ರದ್ದು ಮಾಡಿಬಿಡೋಣ. ಇದನ್ನು ನಾನು ನೋವಿನಿಂದ ಹೇಳುತ್ತಿದ್ದೇನೆ. ಈ ರೀತಿ ಪರಿಶಿಷ್ಟ ಜಾತಿ ಜನಾಂಗದ ಹೆಸರಿನಲ್ಲಿ ದುರುಪಯೋಗ ಮಾಡಿಕೊಳ್ಳುತ್ತೇವೆಂದರೆ ಮೀಸಲಾತಿ ಬೇಕಾಗಿಲ್ಲ. ಇಂತಹ ಮೀಸಲಾತಿ ಅವಶ್ಯಕತೆ ಇಲ್ಲ. ನೀವು ಕರ್ನಾಟಕದಲ್ಲಿ ಇದೇ ರೀತಿ ಮುಂದುವರೆಸುವುದಾದರೆ Article 341 ಮತ್ತು Article 242 ಅನ್ನು ತೆಗೆದುಬಿಡಿ. ಅದಕ್ಕೆ ಮಾನ್ಯ ಅಧ್ಯಕ್ಷರೆ, ಇದನ್ನು withdraw ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇದು ಬಹಳ serious matter. ನೀವು ಆ ರೀತಿಯಾಗಿ ನಡೆದುಕೊಳ್ಳುವುದು ಸರಿಯಲ್ಲ. ಡಾಕ್ಟರ್ ಮಹಾದೇವಪ್ಪ ನವರೇ ನೀವು ಏನು ಹೇಳುತ್ತೀರಿ? ಹೇಳಿ.

ಡಾ: ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ನೋವಿನಿಂದ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಹಿಂದೆ ಈ ವಿಷಯ cabinet ಮುಂದೆ ಬಂದಿತ್ತು. ಮಾನ್ಯ ಸಚಿವರಾದ ಕಾರಜೋಳರವರು ವಿವರಣೆಯನ್ನು ಕೊಟ್ಟ ಹಿನ್ನೆಲೆಯಲ್ಲಿ cabinet ನಲ್ಲಿ ಚರ್ಚೆಯಾಗಿದ್ದು, ಉತ್ತರ ಕರ್ನಾಟಕದ ಮೊಗೇರ ಬೇರೆ, ದಕ್ಷಿಣ ಕರ್ನಾಟಕದ ಮೊಗೇರ ಬೇರೆ ಇದೆ. There characteristic features are different and south Karnataka Characteristic features are different. They are coming under the category of scheduled caste. It is not possible to provide them benefits meant for scheduled castes. It is very clear and Hon'ble member has to be communicated; the question would be there is no provision, there is no stock for the mogera of uttara kannada to give reservation under scheduled caste.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇದು ಸಂವಿಧಾನದಲ್ಲಿರುವಂತಹ ಅಧಿಕಾರ ಮತ್ತು ಸಂವಿಧಾನದ provisions. ಸಂವಿಧಾನದ provisions ಯಾವುದೇ ರಾಜ್ಯದ Assembly ನಲ್ಲಿಟ್ಟು pass ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಅವರಿಗೆ ಕೊಡುವುದಕ್ಕಾಗುತ್ತದೆಯೇ? ಇಲ್ಲಿ ಇದನ್ನು ತರುವುದಕ್ಕೆ ಅಧಿಕಾರ ಏನಿದೆ? ಇದು ಸಂವಿಧಾನದ provisions.

ಅಧ್ಯಕ್ಷರು : ಉತ್ತರ ಕೂಡ ಹಾಗೆ ಇದೆ. ಇದು ಅಪ್ರಸ್ತುತ.ನೀವು ಇಲ್ಲಿ ಕೇಳಲೇಬಾರದು. ದಯವಿಟ್ಟು ನೀವು ಕುಳಿತುಕೊಳ್ಳಿ. ಇಲ್ಲಿ ಅದನ್ನು ತಿರ್ಮಾನ ಮಾಡುವ ಅಧಿಕಾರ ಇಲ್ಲ. ಇಲ್ಲಿ ಇದರ ಬಗ್ಗೆ allow ಮಾಡುವು ದಕ್ಕಾಗುವುದಿಲ್ಲ.

ಶ್ರೀ ಸುನಿಲ್ ವಿ. ಹೆಗಡೆ : ನಾನು ಸೇರಿಸುವುದಕ್ಕೆ ಹೇಳುತ್ತಿಲ್ಲ.

ಅಧ್ಯಕ್ಷರು : ನೀವು ಏನೇ ಹೇಳಿದರೂ ಇದು ಅಪ್ರಸ್ತುತ.

ಶ್ರೀ ಸುನೀಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ ಇದನ್ನು ಸೇರಿಸುವುದಕ್ಕೆ ಹೇಳುತ್ತಿಲ್ಲ. ಇದನ್ನು ತಾವು ತಪ್ಪಾಗಿ ತಿಳಿದುಕೊಳ್ಳಬೇಡಿ. ನಾನು ಅವರನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಿ ಎಂದು ಹೇಳುತ್ತಿಲ್ಲ. ಅವರಿಗೆ ಒಂದು ಬಾರಿ ಕೊಡುವುದಕ್ಕಾಗುವುದಿಲ್ಲವೆಂದು ಕಾಯಿದೆ ಪ್ರಕಾರ ಮಾಡಿ ಕಳುಹಿಸಿ. ನಾನು ಅವರ ಪರವಾಗಿ ಕೇಳುತ್ತಿಲ್ಲ. ಇದನ್ನು ಒಂದು ಬಾರಿ ಫೈನಲ್ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಕೊಡುವುದಕ್ಕಾಗುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರಲ್ಲ, ಮುಗಿಯಿತು. ನೋಡಿ ಸುನೀಲ್‌ರವರೇ, ಉತ್ತರ ಬಹಳ ಸ್ಪಷ್ಟವಾಗಿದೆ.

ಶ್ರೀ ಸುನೀಲ್ ವಿ.ಹೆಗಡೆ : ನಾನು ಹೇಳುತ್ತಿರುವುದೇನೆಂದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು, ನಾನು ಅವರನ್ನು ಸೇರಿಸಿ ಎಂದು ಹೇಳುತ್ತಿಲ್ಲ. ನಾನು ಈ ವಿಷಯವನ್ನು clear ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಇದ್ನು ಮುಕ್ತಾಯ ಮಾಡೋಣ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಯಾರೋ ಖುಷಿ ಪಡಿಸುವುದಕ್ಕೋಸ್ಕರ ಇಂತಹ ವಿಚಾರಗಳನ್ನು ಮಾಡತಕ್ಕದ್ದಲ್ಲ.

ಡಾ: ಹೆಚ್.ಸಿ. ಮಹಾದೇವಪ್ಪ : ಸರ್ಕಾರ ತನ್ನ ಆದೇಶದಲ್ಲಿ ಸ್ಪಷ್ಟವಾಗಿ ಹೇಳಬೇಕು. ಮೊಗೇರ ಉತ್ತರ ಕರ್ನಾಟಕದವರು scheduled caste category ಗೆ ಬರುವುದಿಲ್ಲ. ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಮುಗಿಯಿತು.

ಅಧ್ಯಕ್ಷರು : ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಹಾದೇವಪ್ಪನವರೇ ಈಗಾಗಲೇ ಉತ್ತರ ಕೊಟ್ಟಿದೆ.

ಅಧ್ಯಕ್ಷರು : ಈಗ ಅರ್ಧ ಗಂಟೆಗಳ ಕಾಲಾವಧಿ ಚರ್ಚೆ. ಶ್ರೀ ವಿ. ಮುನಿಯಪ್ಪ ಇಲ್ಲ, ಶ್ರೀ ಯು.ಟಿ. ಖಾದರ್ ಇಲ್ಲ, ಶ್ರೀ ಎನ್.ಎ. ಹ್ಯಾರೀಸ್ ಇಲ್ಲ. ಅಪ್ಪಚ್ಚುರಂಜನ್‌ರವರೇ ತಾವು ಒಂದು ನಿಮಿಷ ಇರಿ. ಈಗ ಮಾನ್ಯ ಸಾ.ರಾ. ಮಹೇಶ್‌ರವರು ವಿಷಯ ಗಮನ ಸೆಳೆಯುವ ಸೂಚನೆ ಇದೆ. ಅದನ್ನು ಅವರು ಕೇಳುತ್ತಾರೆ.

2) **ವಿಷಯ : ಮೈಸೂರು ತಾಲ್ಲೂಕು ಸಾಗರಕಟ್ಟೆ ಬಳಿ ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಬಗ್ಗೆ.**

\- - -

ಶ್ರೀ ಸಾ. ರಾ. ಮಹೇಶ್ : ಮಾನ್ಯ ಅಧ್ಯಕ್ಷರೇ ಮೈಸೂರು ತಾಲ್ಲೂಕು ಸಾಗರಕಟ್ಟೆ ಬಳಿ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಕೆ.ಆರ್.ಡಿ.ಸಿ.ಎಲ್ ವತಿಯಿಂದ 3ನೇ ಹಂತದ ಸೇತುವೆ ನಿರ್ಮಾಣ ಯೋಜನೆಯಡಿಯಲ್ಲಿ ಒಟ್ಟು 360 ಸೇತುವೆಗಳನ್ನು 4 ಪ್ಯಾಕೇಜುಗಳಲ್ಲಿ ನಿರ್ಮಿಸಲು ಒಟ್ಟು ರೂ. 210.00 ಕೋಟಿಗಳ ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ. ಲೋಇ 51 ಇಎಪಿ 2005 ದಿನಾಂಕ: 23–01–2006 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಮೇಲ್ಕಂಡ 360